ಓಡಿ ಬಂದು ಅಪ್ಪಿಕೊಂಡು ಕಾರಣ ಕೇಳಿದರು. 'ಅಲ್ಲಿ ಯಾವ ಪ್ರಾಣಿಯೂ ಗಟ್ಟಿಯಾಗಿ ಗುರ್ರ್ ಅನ್ನಲಿಲ್ಲ. ಸುಮ್ಮನೆ ಹೋದದ್ದು. ಅದಕ್ಕಿಂತ ಚೆನ್ನಾಗಿ ಟೀಚರ್ ಗುರ್ರ್ ಅಂದಿದ್ದರು' ಅಂದ ಹುಡುಗ. ಮೊಮ್ಮಗ ಹೇಳಿದ್ದು ಸರಿಯಾಗಿ ಅರ್ಥವಾಗದ ಮಂತ್ರಿಗಳು ಕಾರಣ ಏನೆಂದು ಕೇಳಲು ಮೇಡಮ್ಮನ್ನು ಹೋಗಿ ಕರೆದುಕೊಂಡು ಬರುವಂತೆ ಅಪ್ಪಣೆ ಮಾಡಿದರು. ಮಂತ್ರಿಯವರ ಚೇಲನೊಬ್ಬ ಹೋಗಿ ಆಕೆಯನ್ನು ಕರೆದು ತಂದ. 'ರಿಯಲ್ ಹುಲಿ, ಸಿಂಹಕ್ಕಿಂತ ಜಾಸ್ತಿ ಇವರೇ ಗರ್ಜಿಸ್ತಾರಂತೆ. ಆಗಿನಿಂದ ಅದನ್ನೇ ಹೇಳುತ್ತಾ ಇದ್ದಾನೆ...' ಟೀಚರರೊಡನೆ ಬಂದ ಮಂತ್ರಿಯ ಮಡದಿ ದನಿಗೂಡಿಸಿದರು.

ಮಂತ್ರಿಗಳಿಗೆ ನಗು ಬಂತು. 'ಏನಮ್ಮ ಹುಡುಗ ಏನು ಹೇಳ್ತಿದಾನೆ?' ಕೇಳಿದರು ಮಂತ್ರಿ.

'ಸರ್ ಅಲ್ಲಿ ಹುಲಿಸಿಂಹಗಳೆಲ್ಲ ಮಲಗಿಕೊಂಡಿದ್ದವು. ಯಾವುದೂ ಗುರ್ರ್ ಅನ್ನಲಿಲ್ಲ. ಅವನಿಗೆ ಗರ್ಜಿಸುವ ಹುಲಿ ಸಿಂಹ ನೋಡುವ ಆಸೆಯಿತ್ತು' ವಿವರಿಸಿದಳು ಟೀಚರ್.

'ಓಹೋಹೋ... ಅದಕ್ಕೇ ಸಿಂಹಗಳಿಗಿಂತ ನೀವೇ ವಾಸಿ ಅಂತಾನೆ. ಎಲ್ಲಿ ನಮಗೂ ತೋರ್ಸಿ ನಿಮ್ಮ ಗರ್ಜನೆಯನ್ನು...'

'ಸರ್... ಅದು ಮಗುವಿಗೆ ತಿಳಿಸಿ ಹೇಳಲಿಕ್ಕೆ ಗರ್ಜಿಸಿದ್ದಷ್ಟೇ...' ನಾಚಿ ನುಡಿದಳು ಟೀಚರ್.

'ನೋಡೋಣ... ನಾವೂ ಕೇಳೋಣವಂತೆ...' ಪುಸಲಾಯಿಸಿದರು ಮಂತ್ರಿ.

ಸ್ವಲ್ಪ ಪ್ರಯತ್ನ ಪಟ್ಟು 'ಗುರ್ರ್ ಗುರ್ರ್' ಅಂದಳಾಕೆ.

'ಈಗ ಸಣ್ಣದಾಗಿ ಹೇಳಿದ್ರು... ಅವತ್ತು ಇನ್ನೂ ಜೋರಾಗಿ ಚೆನ್ನಾಗಿ ಗರ್ಜಿಸಿದ್ರು...' ಹುಡುಗ ಬುಸುಗುಡುತ್ತಲೇ ನುಡಿದ. 'ಹೌದೇನಮ್ಮಾ?' ಅಂದರು ಮಂತ್ರಿ.

'ಈವತ್ತಿನ್ನೂ ಊಟ ಮಾಡಿಲ್ಲ ಸಾರ್... ಬೆಳಿಗ್ಗೆ ಎದ್ದು ಖಾಲಿಹೊಟ್ಟೆಯಲ್ಲೇ ಮೃಗಾಲಯ ಸುತ್ತಿದ್ದು. ಇದೀಗ ನೀವು ಕರೀತಿದ್ರಿ ಅಂತ ಅವರು ಊಟ ರೆಡಿ ಮಾಡುತ್ತಿದ್ದ ನನ್ನನ್ನು ನಡುವೇನೆ ಎಬ್ಬಿಸಿಕೊಂಡು ಬಂದ್ರು...' ಆಕೆ ಸಂಕೋಚಪಟ್ಟುಕೊಂಡು ಹೇಳಿದಳು.

'ಸರಿಯಮ್ಮ ಹೋಗು... ಊಟಮಾಡು' ಅಂದರು ಮಂತ್ರಿ.

ಅಷ್ಟು ಹೊತ್ತಿಗೆ ಸುದ್ದಿ ತಿಳಿದ ಹುಡುಗನ ಅಪ್ಪ, ಭಾವೀ ಎಮ್ಮೆಲ್ಲೆ, ಮಂತ್ರಿಗಳ ಉತ್ತರಾಧಿಕಾರಿಯೆಂದೇ ಬಿಂಬಿಸಿಕೊಂಡು ಬರುತ್ತಿರುವ ಮಂತ್ರಿಯವರ ಮಗನೂ ಬಂದಿದ್ದ. ಆತನನ್ನು ಉದ್ದೇಶಿಸಿ ನಕ್ಕು ನುಡಿದರು ಮಂತ್ರಿ, 'ತಿಳ್ಕೊಂಡಿಯಾ? ಹುಲಿಸಿಂಹಗಳಿಗೆ ಹೊಟ್ಟೆಗೆ ಭರಪೂರ ಸಿಕ್ತು ಅಂದರೆ ಮತ್ತೆ ಗರ್ಜಿಸೋಲ್ಲ... ಖಾಲಿ ಹೊಟ್ಟೆಯಲ್ಲಿದ್ರೆ ಅವುಗಳ ಕಿರುಚಾಟ ಸಹಿಸಲಿಕ್ಕೆ ಆಗೋದಿಲ್ಲ... ಆದರೆ ಈ ವರ್ಕಿಂಗ್ ಕ್ಲಾಸ್ ಮನುಷ್ಯರಿಗೆ ಹೊಟ್ಟೆಗಿಲ್ಲ ಅಂದರೆ ಗರ್ಜನೆ ಇರಲ್ಲ... ಹೊಟ್ಟೆ ಒಮ್ಮೆ ತುಂಬಿದರೆ ಮತ್ತೆ ಅವರ ಕಿರಿಕಿರಿ ಸಹಿಸಲು ಸಾಧ್ಯವಿಲ್ಲ. ಅದಿಕ್ಕೇ ರಾಜಕೀಯದಲ್ಲಿ ನಾವೇ ಗರ್ಜಿಸುತ್ತಾ ಇರಬೇಕೂಂದ್ರೆ ಮೆಜಾರಿಟಿ ಜನ ಅರ್ಧಹೊಟ್ಟೆಯಲ್ಲಿರೋ ಹಂಗೆ ನೋಡ್ಕೋಬೇಕು...'

ಮಗ ನಕ್ಕ. ಮೊಮ್ಮಗ ಅರ್ಥವಾಗದೆ ಪಿಳಿಪಿಳಿ ನೋಡಿದ.

## ಗೋಪೀನಾಥ್ ರಾವ್

ಊರು ದಕ್ಷಿಣ ಕನ್ನಡ ಜಿಲ್ಲೆಯ ಕಟಪಾಡಿ. ತಂದೆ ಹೆಸರಾಂತ ಯಕ್ಷಗಾನ ಅರ್ಥಧಾರಿ ಹಾಗೂ ಕನ್ನಡ ಅಧ್ಯಾಪಕ, ದಿವಂಗತ ಮಟ್ಟಿ ಸುಬ್ಬರಾಯರು. ಅಮ್ಮ ಮುತ್ತಮ್ಮ. ವೃತ್ತಿಯಲ್ಲಿ ಲೆಕ್ಕಪರಿಶೋಧಕ. ಪ್ರಸ್ತುತ ದುಬೈಯಲ್ಲಿ ಉದ್ಯೋಗ. ಅವರ ಕಥಾಸಂಕಲನಗಳು: 'ಸಾರ್ವಭೌಮ', 'ಪಾಂ ಪಾಂ ರೈಲು', 'ರಂಗವಲ್ಲಿ ಮನೆ ಎಲ್ಲಿ?'